Regd. No. M 1299 SATYAVADI Fonnded 1917

ಸತ್ಯವಾದಿ

SATYAVADI

(ತಿರುಮನೆ ಸಿದಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 30 ಸಂಚಿಕೆ 12] ಶುಕ್ರವಾರ 13—9—46 [ಬಿಡಿ ಪ್ರತಿ 3 ಪೈ

ಸಂಸ್ಥಾನದಲ್ಲಿ ಗುಮಾಸ್ತರುಗಳ ಮುಷ್ಕರವೇ ?

ಮೈಸೂರು ಸೆ. 13 — 'ನಮಗೆ ಮೂಲ ಸಂಬಳ ರೂ. 50 ಇರಬೇಕು. ಪ್ರಭುತ್ವವು ಅದನ್ನು ಗಮನಿಸಬೇಕು' ಎಂಬುದಾಗಿ ಮೈಸೂರು ಸಂಸ್ಥಾನದ ರೆವಿನ್ಯೂ ಶಾಖೆಗಳ ಗುಮಾಸ್ತರುಗಳೆಲ್ಲರೂ ತಿಯಾಯ ಜಿಲ್ಲೆಯ ಜಿಲ್ಲಾಧಿಕಾರಿಗಳ ಮೂಲಕ್ಕ ಪ್ರಭುತ್ವದ ಪ್ರಧಾನ ಕಾರ್ಯದರ್ಶಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಮುದ್ರಣವಾದ ಅರಿಕೆಯನ್ನು ಈ ದಿವಸ ಕಳುಹಿಸಲಿರುವರೆಂದು ತಿಳಿಯಬಂದಿದೆ. ದಿವಾನರು ಮತ್ತು ಸಚಿವರುಗಳಿಗೂ ಸಹಾ ಮನವಿಯನ್ನು ವೈಯಕ್ತಿಕವಾಗಿ ತಲುಪಿಸಲಿರುವರೆಂದು ಕೇಳುತ್ತೇವೆ. ಆಕ್ಟೋಬರ್ ಮಾಸದ ವೇಳೆಗೆ ವೇತನವನ್ನು ಹೆಚ್ಚಿಸದಿದ್ದರೆ ಮುಷ್ಕರವನ್ನು ಹೂಡುವುದಾಗಿ ತಿಳಿಸಲಿರುವರಂತೆ.

ಸೆಂಟ್ ಫಿಲೋಮಿನ ಕಾಲೇಜ್ ಬಳಿ ವಿದ್ಯಾರ್ಥಿಗಳ ಪ್ರತಿಭಟನೆ

ಮೈಸೂರು ಸೆ 13 — ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಬೀ ರಂ ನಾಣೇಶರಾಯರ ಅಧ್ಯಕ್ಷತೆಯಲ್ಲಿ ಸೆಂಟ್ ಫಿಲೋಮಿನಾ ಕಾಲೇಜ್ ಬಳಿ ವಿದ್ಯಾರ್ಥಿಗಳ ಪ್ರಚಂಡ ಸಭೆ ಸೇರಿದು ರಾಷ್ಟ್ರಾಂಗ ಘಟನಾ ಸಮಿತಿಗೆ ನಾಮಕರಣ ಸದಸ್ಯರನ್ನು ಕಳುಹಿಸುವ ನೀತಿಯನ್ನು ಪ್ರತಿಭಟಿಸಿದರು. ಶ್ರೀ ತಮನಪ್ಪ ಭೂಪಾಲ್ ಮುಂತಾದವರು ಮಾತನಾಡಿದರು. ಬಳಿಕ್ಕೆ ಧ್ವಜವಂದನೆ ಮುಂತಾದ ಕಾರ್ಯಕ್ರಮವು ನಡೆಯಿತು. ಆಯ್ಕೆಯ ಪ್ರತಿನಿಧಿಗಳೇ ಘಟನಾ ಸಮಿತಿಯಲ್ಲಿರಬೇಕೆಂಬ ನಿರ್ಣಯವು ಸರ್ವಾನುಮತದಿಂದ ಅನುಮೋದಿಸಲ್ಪಟ್ಟಿತು.

ಸಾರ್ವಜನಿಕ ಸಭೆ

ಮೈಸೂರು ಸೆ. 13 — ನಿನ್ನೆ ಸಾಹುಕಾರ್ ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಆಶ್ರಯದಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಘಟನಾ ಸಮಿತಿಗೆ ಚುನಾಯಿತ ಪ್ರತಿನಿಧಿಗಳಿಂದೇ ಕೆಂಬ ನಿರ್ಣಯವಾಯಿತು.

ವೇತನ ಈ ದಿವಸ ಪಡೆಯುವರು

ಮೈಸೂರು ಸೆ. 13 — ತುಟ್ಟಿ ಭತ್ಯದ ಸಮೇತ ನಗರದ ಜಾಡಮಾಲಿಗಳು ಈ ದಿವಸ ವೇತನವನ್ನು ಪಡೆಯುವರೆಂದು ತಿಳಿದು ಬಂದಿದೆ. ಜಾಡಮಾಲಿಗಳಿಗೆ ವಾರಕ್ಕೆ ಒಂದು ರೂಪಾಯಿ ರಾಗಿ ಡೊರಕಿಸಲಾಗುವುದೆಂದು ಹೇಳಲಾಗಿದೆ.

ಜಿನ್ನಾ ಬಂಧನವೇ ?

ಈಗಿನ ಹಿಂದೀ ನಡುಗಾಲ ಸರ್ಕಾರವು ಬೇಗನೇ ಜಿನ್ನಾರವರನ್ನು ಬಂಧಿಸಿ ಲೀಗು ಸಂಸ್ಥೆಯನ್ನು ಕಾನೂನು ಬಾಹ್ಯ ಸಂಸ್ಥೆಯನ್ನಾಗಿ ಮಾಡಲಿದೆಯೆಂದು ಪ್ಯಾರಿಸ್ಸಿನಲ್ಲಿ ಪ್ರಕಟವಾದ ಲಂಡನ್ನಿನ ಡೇಲಿಮೇಲ್ ಬರೆದಿದೆ ಇದನ್ನು ಕೇಂದ್ರ ಸರ್ಕಾರ ಅಲ್ಲಗೆಳೆದಿಲ್ಲ.

ಮೆಕ್ಕಾ ಯಾತ್ರೆ

ಮೈಸೂರು ಸೆ. 13 — ಮೈಸೂರು ಜನಪ್ರೀ ವರ್ತಕ ಸಂಘದ ಅಧ್ಯಕ್ಷ ಜಿ॥ ಅಹ್ಮದ್ ಖಾಜ ದಸರಾ ಪ್ರತಿನಿಧಿ ಸಮಾವೇಶನವನ್ನು ಮುಗಿಸಿ ಕೊಂಡು ಮೆಕ್ಕಾ ಪ್ರವಾಸ ಹೋಗುವರು.

ಬಟ್ಟೆ ಪರಿಸ್ಥಿತಿ

ಮೈಸೂರು ಸೆ. 13 — ಗಿರಿಣಿ ಬಟ್ಟೆ ಪಡೆಯುವುದು ದುಸ್ಸಹವಾಗಿದೆ. ಪಂಚೆ ಸಿಕ್ಕದೆ ಜನರಿಗೆ ತೊಂದರೆಯಾಗಿದೆ ಎಲ್ಲಾ ಬಟ್ಟೆ ಅಂಗಡಿಗಳಲ್ಲೂ ಜನರು ತುಂಬಿರುತ್ತಾರೆ.

Edited, Printed and Published by M. S. Krishna Rao at the Satyavadi Press, Chamaraja Agrahar, Mysore.

ಪ್ಯಾಲೀಸ್ತಾನ ವಿಭಜನೆಗೆ ಅರಬ್ಬರ ತಿರಸ್ಕಾರ

ಪಾರ್ಟಿಗಳು

ನವದೆಹಲಿ, ಸೆ 11 — ಮುಸ್ಲಿಂ ಲೀಗಿನ ಆಡಳಿತ ಮತ್ತು ಜಳುವಳಿ ಸಮಿತಿಗಳು ಸಭೆ ಸೇರಿದ್ದವು. ಶಾಸನ ಸಭೆಗಳಿಗೆ ಲೀಗ್ ಸದಸ್ಯರುಗಳು ಬಹಿಷ್ಕಾರ ಹಾಕಬೇಕೆಂದು ತೀರ್ಮಾನಿಸಿದವು.

ರಾಷ್ಟ್ರೀಯ ಮುಸ್ಲಿಂರು ಹಿಂದೂ ಮತ್ತು ಮುಸ್ಲಿಂ ಹಿತ ಸಾಧನೆಗಾಗಿ ನಡುಗಾಲ ಸರ್ಕಾರದ ಸ್ಥಾನವನ್ನು ತ್ಯಜಿಸಬೇಕೆಂದು ಶ್ರೀ ನಾರೀಮನ್ ಮನವಿ ಹೊರಡಿಸಿದ್ದಾರೆ.

ನವದೆಹಲಿ, ಸೆ 12 — ದಕ್ಷಿಣ ಭಾರತ ರೈಲ್ವೆ ಮುಷ್ಕರ ಕೂಡಲೇ ಕೊನೆಗೊಂಡರೆ ಮದ್ರಾಸ ಬೇಡಿಕೆಗಳನ್ನು ಪರಿಶೀಲಿಸಲಾಗುವುದೆಂದು ಡಾ॥ ಆಸಫ್ ಅಲಿ ಶ್ರೀ ಗುರುಸ್ವಾಮಿಯವರಿಗೆ ತಿಳಿಸಿದ್ದಾರೆ.

ವಾಷಿಂಗ್ಟನ್, ಸೆ 10 — ತಕ್ಷಣವೇ ಭಾರತಕ್ಕೆ 225000 ಟನ್ ಆಹಾರ ತಲಪಬೇಕು. ಹಾಗಿಲ್ಲದಿದ್ದರೆ ಪಡಿಭತ್ಯ ವ್ಯವಸ್ಥೆ ಹದಗೆಡುವುದು ಎಂದು ಭಾರತ ಕ್ಷಾಮ ಸಮಿತಿ ಪ್ರಕಟಿಸಿದೆ.

ಬರ್ಲಿನ್, ಸೆ 11 — ಜರ್ಮನಿಯಲ್ಲಿ ಅತ್ಯಂತ ಬೆಲೆ ಬಾಳುವ ಒಡವೆಗಳಿವೆ. ಬ್ರಿಟಿಷ್ ಮತ್ತು ಅಮೇರಿಕದವರು ಹುಡುಕುತ್ತಿದ್ದಾರೆ ಕೆಲವೆಡೆ ಪತ್ತೆಯಾಗಿವೆ.

ನವದೆಹಲಿ, ಸೆ 10 — ಟೈಪ್‌ರೇಟರ್ ಮೇಲಿನ ನಿಯಂತ್ರಣ ರದ್ದಾಗಿದೆ.

ಬೆಂಗಳೂರು, ಸೆ 11 — ಮೈಸೂರಿನಲ್ಲಿ ಸ್ಟ್ಯಾಂಡರ್ಡ್ ಬಟ್ಟೆ ತಯಾರಿಸುವುದು ಸಾಧ್ಯವೇ ಎಂಬ ಪರಿಶೀಲನೆಗಾಗಿ ದಿವಾನರ ಅಧ್ಯಕ್ಷತೆಯಲ್ಲಿ ಗಿರಣಿ ಮಾಲೀಕರ ಸಭೆ ನಡೆಯಿತು.

ಬೊಂಬಾಯಿ, ಸೆ 11 — ಶೇ 25 ನೌಕರಿಯು ಸರ್ಕಾರಿ ಗುಮಾಸ್ತೆ ಶಾಖೆಯಲ್ಲಿ ನಿವಾಸಲಿಡಬೇಕೆಂದು ಕೇಂದ್ರ ಸರಕಾರದ ಗೃಹ ಸದಸ್ಯ ಸರ್ದಾರ್ ಪಟೇಲರು ಅಪ್ಪಣೆ ಮಾಡಿದ್ದಾರೆ (ಮುಸ್ಲಿಂಗೆ

ಬೊಂಬಾಯಿ, ಸೆ 11 — ದಕ್ಷಿಣ ಇಂಡಿಯಾ ರೈಲ್ವೆ ಮುಷ್ಕರ ಸಹಾನುಭೂತಿಗಾಗಿ 1000000 ಮಂದಿ ರೇಲ್ವೆ ಕೆಲಸಗಾರರು ಸಂಪು ಹೂಡಲಿರುವರು

ಬೆಂಗಳೂರು, ಸೆ 11 — ಜ॥ ಷರೀಫರು ಪ್ರತಿನಿಧಿ ಸಭೆಯ ಹಕ್ಕು ಬಾಧ್ಯತಾ ಸಮಿತಿಅಧ್ಯಕ್ಷರಾಗಿ ನೇಮಿಸಲ್ಪಟ್ಟರು.

ಅವಿಶ್ವಾಸ ನಿರ್ಣಯ ಮುಂಡನೆ

ಕಲ್ಕತ್ತಾ, ಸೆ 11 — ಕಾಂಗ್ರೆಸ್ ಶಾಸನ ಸಭಾ ಪ್ರತಿನಿಧಿಗಳೊಬ್ಬರು ಬಂಗಾಳ ಲೀಗ್ ಮಂತ್ರಿ ಮಂಡಳದ ಮೇಲೆ ಅವಿಶ್ವಾಸ ನಿರ್ಣಯ ಮಂಡಿಸಿರುವರು. ಕಲ್ಕತ್ತಾದಲ್ಲಿ ನಡೆದ ದಂಗೆಯ ಪ್ರಸಂಗದಲ್ಲಿ ಕೆಲವು ಸದಸ್ಯರು ತುರುತು ನಿರ್ಣಯಗಳನ್ನು ತಂದಿರುವರು.

ವೈಸರಾಯರಿಗೆ ಆಹ್ವಾನ

ನವದೆಹಲಿ ಸೆ. 12 — ವೈಸರಾಯರು ಜಿನ್ನಾರವರಿಗೆ ಪ್ರಚಲಿತ ಸ್ಥಿತಿ ಏರ್ಪಡಿಸುವ ಬಗ್ಗೆ ಜಿನ್ನಾರವರನ್ನು ಆಹ್ವಾನಿಸಿರುವರೆಂದು ಹೇಳಲಾಗಿದೆ. ಈ ಆಹ್ವಾನವನ್ನು ಜಿನ್ನಾರು ಸ್ವೀಕರಿಸಿರುವುದಾಗಿ ಬೊಂಬಾಯಿನ ವರ್ತಮಾನ.

ಕಪ್ಪು ಧ್ವಜ ಪ್ರದರ್ಶನಕ್ಕಾಗಿ ಕೆಲಸದಿಂದ ವಜಾ

ಕಲ್ಕತ್ತಾ ಸೆ. 12 — ಒಂದು ಸ್ಟೀಮರು ಕಂಪೆನಿಯ ಮುಸ್ಲಿಂ ಕೆಲಸಗಾರರು ತಾತ್ಕಾಲಿಕ ಸರಕಾರ ಸ್ಥಾಪನೆಯಾದ ದಿನ ಕಪ್ಪು ಬಾವುಟವನ್ನು ಸ್ಟೀಮರಿನ ಮೇಲೆ ಪ್ರದರ್ಶಿಸಿದ್ದಕ್ಕಾಗಿ ಆ ಸ್ಟೀಮರಿನಲ್ಲಿನ ಎಲ್ಲ ಮುಸ್ಲಿಂ ಕೆಲಸಗಾರರೂ ವಜಾ ಮಾಡಲ್ಪಟ್ಟಿರುವರು. ಇವರನ್ನು ಕೆಲಸಕ್ಕೆ ತೆಗೆದು ಕೊಳ್ಳಬೇಕೆಂದೂ ತಪ್ಪಿದಲ್ಲಿ ಇದು ಘೋರ ರೀತಿ ಪರ್ಯವಸಾನವಾಗುವುದೆಂದು ಲೀಗು ಸೆಕ್ರಟರಿ ಕಂಪೆನಿಗೆ ಬರೆದಿದ್ದಾರೆ. ಇದೂ ಒಂದು ಮುಸ್ಲಿಂ ಮಹಾಮುಷ್ಕರವಾಗುವ ಭಯವಿದೆ.

ಪಾಲೀ ಸ್ಥಾನ ಪ್ರಕರಣ ಭದ್ರತಾ ಸಮಿತಿಗೆ

ಲಂಡನ್ ಸೆ. 12 — ಪಾಲೀಸ್ತಾನ ದ್ವಿತೀಯ ದಿವಸದ ಪರಿಷತ್ತಿನ ಆರಂಭ ಕಾಲದಲ್ಲಿ ಬ್ರಿಟಿಷ್ ಪ್ರಧಾನಿ ವಿದೇಶಾಂಗ ಸಚಿವ ಮತ್ತು ಕಾಲನಿಗಳ ಮಂತ್ರಿ ಹಾಜರಾಗಿದ್ದರು. ಆಂಕಾಕಾಸ್ಟಾರ ಭವನದಲ್ಲಿ ಸಮಾವೇಶಗೊಂಡಿದ್ದ ಪರಿಷತ್ತಿನಲ್ಲಿ ಸಿರಿಯಾ ಅರಬ್ ಪ್ರತಿನಿಧಿ ಹೆಚ್. ಯಿ. ಫಾರಿಸ್‌ಬೇ ಎಲ್ ಖಾರಿಯುವರು ಬ್ರಿಟಿಷ್ ಪ್ರಧಾನಿಯು ಪರಿಷತ್ತಿನ ಪ್ರಾರಂಭದಲ್ಲಿ ಮಾಡಿದ ಭಾಷಣಕ್ಕೆ ಉತ್ತರವಾಗಿ 'ವಿವಿಧ ರಾಷ್ಟ್ರೀಯತ್ವಕ್ಕೆ ಪಾಲೀಸ್ತಾನ ವಿಭಾಗವಾಗ ಕೂಡದು' ಎಂದರು. ಇರಾಕಿನ ಮೂರು ಎಡ ಪಕ್ಷಗಳು ಪಾಲೀಸ್ತಾನ ಪ್ರಶ್ನೆಯನ್ನು ಭದ್ರತಾ ಸಮಿತಿಗೆ ಬಿಡಿರೆಂದು ತಿಳಿಸಿದೆ.

—

ಬಂಗಾಳ ಶಾಸನ ಸಭೆಗೆ ಸ್ವೀಕೃತರ ಪ್ರವೇಶ ಬಂದಾಗಿದೆ.

ಬಾಂಕಾಂಕ್ 60 ಸಾವಿರ ಟನ್ ಅಕ್ಕಿ ರಫ್ತು ಮಾಡಲಿದೆ.

50 ಸಾವಿರ ಟನ್ ಕೆನಡಾ ಗೋಧಿ ಭಾರತಕ್ಕೆ ಈ ತಿಂಗಳು ಒದಲಿದೆ.